ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 14-01-2016

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ದಕ್ಷಿಣ ರಾಜ್ಯಗಳ ಗ್ರಾಹಕ ವ್ಯವಹಾರಗಳ ಇಲಾಖೆಯ ಪ್ರಾದೇಶಿಕ ಸಭೆ:<br><br>ಅಧ್ಯಕ್ಷತೆ:<br><br>ಶ್ರೀ ರಾಂವಿಲಾಸ್ ಪಾಸ್ವಾನ್, ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣಾ ಖಾತೆ ಸಚಿವರು | 16-1-2016<br>ಶನಿವಾರ<br>ಬೆಳಗ್ಗೆ<br>10-00 ಗಂಟೆಗೆ | ಹೋಟೆಲ್ ದಿ ಕ್ಯಾಪಿಟಲ್<br>ರಾಜಭವನ ರಸ್ತೆ,<br>ಬೆಂಗಳೂರು |
| 2 | ಪತ್ರಿಕಾಗೋಷ್ಠಿ:<br><br>ಶ್ರೀ ಟಿ. ಬಿ. ಜಯಚಂದ್ರ, ಕಾನೂನು, ಸಂಸದೀಯ ವ್ಯವಹಾರಗಳ ಖಾತೆ ಸಚಿವರು | 16-1-2016<br>ಶನಿವಾರ<br>ಮಧ್ಯಾಹ್ನ<br>12-30 ಗಂಟೆಗೆ | ಸಭಾಂಗಣ,<br>ಉನ್ನತ ಶಿಕ್ಷಣ ಪರಿಷತ್,<br>ಅರಮನೆ ರಸ್ತೆ,<br>ಬೆಂಗಳೂರು |
| 3 | ಬೆಳ್ಳಿ ಸಿನಿಮಾ- ಬೆಳ್ಳಿ ಮಾತು<br><br>ಬೆಳ್ಳಿ ಸಿನಿಮಾ: ತಮಸ್ಸು<br>ಬೆಳ್ಳಿ ಮಾತು: ಎಂ.ಎಸ್. ರವೀಂದ್ರ ತಮಸ್ಸು ಚಿತ್ರದ ನಿರ್ಮಾಪಕರು<br><br>ಮುಖ್ಯ ಅತಿಥಿಗಳು:<br><br>ಶ್ರೀ ಜಿ.ಎಸ್. ಭಾಸ್ಕರ್, ಚಲನಚಿತ್ರ ಛಾಯಾಗ್ರಾಹಕರು, | 16-1-2016<br>ಶನಿವಾರ<br>ಸಂಜೆ<br>4-00 ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋ,<br>ಮಿಲ್ಲರ್ಸ್ ರಸ್ತೆ,<br>ಬೆಂಗಳೂರು |

| | | | |
|---|---|---|---|
| | ಡಿ. ಸುಮನಾ ಕಿತ್ತೂರು,<br>ಚಲನಚಿತ್ರ ನಿರ್ದೇಶಕರು<br><br>ಅಧ್ಯಕ್ಷತೆ:<br><br>ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು,<br>ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ | | |
| 4 | ಅಂಡ್ ದಿ ಲಾಸ್ಟ್ ಶೆಲ್ ಬಿ ದಿ ಫಸ್ಟ್: ಜಿ.ಆರ್. ಈರಣ್ಣ ವರ್ಕ್ಸ್ ಪ್ರದರ್ಶನದ ಉದ್ಘಾಟನಾ ಸಮಾರಂಭ<br><br>ಉದ್ಘಾಟನೆ:<br><br>ಶ್ರೀ ಗಿರಿಶ್ ಕಾಸರವಳ್ಳಿ,<br>ಚಲನಚಿತ್ರ ನಿರ್ದೇಶಕರು,<br><br>ಮುಖ್ಯ ಅತಿಥಿಗಳು:<br><br>ಶ್ರೀ ಸುಧಾರಕರ್‌ರಾವ್,<br>ಅಧ್ಯಕ್ಷರು,ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ , ಬೆಂಗಳೂರು<br><br>ಶ್ರೀಮತಿ ಸಾಲುಮರದ ತಿಮ್ಮಕ್ಕ | 16-1-2016<br>ಶನಿವಾರ<br>ಸಂಜೆ<br>6-00 ಗಂಟೆಗೆ | ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ ,<br>ಅರಮನೆ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಮಕರ ಸಂಕ್ರಾಂತಿ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ಮಕರ ಸಂಕ್ರಾಂತಿಯ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಮಕರ ಸಂಕ್ರಾಂತಿ ಹಬ್ಬವು ನಿಜವಾಗಿಯೂ ಜಾತ್ಯಾತೀತ ಹಬ್ಬಗಳಲ್ಲೊಂದಾಗಿದೆ. ಸುಗ್ಗಿಯ ಹಿಗ್ಗನ್ನು ಬಿಂಬಿಸುವ ಸಂಕ್ರಾಂತಿ ಹಬ್ಬವು ಹೊಸ ಧಾನ್ಯಗಳ ಆಗಮನದ ಸೂಚಕ. ಸಂಕ್ರಾಂತಿಯ ಈ ಸಂದರ್ಭದಲ್ಲಿ ಅವರೆಯ ಸೊಗಡು, ಹುಣಸೆಯ ಸೊಗಸು ಹಾಗೂ ಕಬ್ಬಿನ ಸೊಬಗು ಮಾತ್ರವಲ್ಲದೆ, ಬಹುತೇಕ ಎಲ್ಲಾ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳೂ ಮಾರುಕಟ್ಟೆಯನ್ನು ಹೇರಳವಾಗಿ ಪ್ರವೇಶಿಸುತ್ತವೆ. ಈ ಹಿನ್ನೆಲೆಯಲ್ಲಿ ಸಂಕ್ರಾಂತಿ ಹಬ್ಬವನ್ನು ನಮ್ಮ ರೈತರ ಹಬ್ಬ ಎಂದೇ ಬಣ್ಣಿಸಬಹುದಾಗಿದೆ.

ಬಡವ-ಬಲ್ಲಿದ ಹಾಗೂ ಜಾತಿ-ವರ್ಗಗಳ ಬೇಧವಿಲ್ಲದೆ ಎಳ್ಳು-ಬೆಲ್ಲವ ಮೆಲ್ಲುವ ಸಂಕ್ರಾಂತಿಯ ಸಂಪ್ರದಾಯ ಈ ಋತುಮಾನದಲ್ಲಿ ಕೊರೆಯುವ ಚಳಿಯ ವೈಪರೀತ್ಯದಿಂದ ಹೊರಬರಲು ಎಲ್ಲರಿಗೂ ಅನುವು ಮಾಡಿಕೊಡುತ್ತದೆ. ವರ್ಷವಿಡೀ ತಮ್ಮ ಜೊತೆಗಿದ್ದು ತಮ್ಮೊಂದಿಗೆ ದುಡಿದು ತಮ್ಮ ದುಡಿಮೆಯಲ್ಲಿ ಶ್ರಮದ ಪಾಲುದಾರರಾಗಿ ಸೇವೆಯನ್ನು ಸಲ್ಲಿಸಿದ ರಾಸುಗಳನ್ನು ಸಿಂಗರಿಸಿ ಅವುಗಳೊಂದಿಗೆ ವೈವಿಧ್ಯಮಯ ಕ್ರೀಡೆಗಳಲ್ಲಿ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ರೈತರು ಸಂಭ್ರಮಿಸುತ್ತಾರೆ.

ಈ ಬಾರಿಯ ಸಂಕ್ರಾಂತಿಯು ನಮ್ಮ ರಾಜ್ಯದ ರೈತರಲ್ಲಿನ ಆತ್ಮ ಬಲ, ಆತ್ಮ ವಿಶ್ವಾಸವನ್ನು ಹಾಗೂ ಆತ್ಮ ಸ್ಥೈರ್ಯವನ್ನು ವೃದ್ಧಿಸಲು ಪ್ರೇರಣೆಯನ್ನು ನೀಡಲಿ ಹಾಗೂ ಸ್ಫೂರ್ತಿಯನ್ನು ಕೊಡಲಿ. ರಾಜ್ಯದ ಜನತೆಯ, ವಿಶೇಷವಾಗಿ ನಮ್ಮ ರೈತರ ಬಾಳು ಬಂಗಾರವಾಗಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಡಿಪಿಎಂ

## ಮಕರ ಸಂಕ್ರಾಂತಿ : ಉಪ ಸಭಾಪತಿ ಶುಭಾಶಯ

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ಮಕರ ಸಂಕ್ರಾಂತಿಯ ಸುಸಂದರ್ಭದಲ್ಲಿ ನಾಡಿನ ಜನತೆಗೆ ಸಂಕ್ರಾಂತಿ ಹಬ್ಬವು ಎಳ್ಳು ಬೆಲ್ಲದ ಸವಿಯೊಂದಿಗೆ ಕಹಿಯನ್ನು ಮರೆಸಿ, ಸಂಭ್ರಮ, ಸಂತೋಷ, ಸುಖ: ಶಾಂತಿ ಸಮೃದ್ಧಿ ತರಲೆಂದು ಕರ್ನಾಟಕ ವಿಧಾನ ಪರಿಷತ್ತಿನ ಉಪ ಸಭಾಪತಿ ಶ್ರೀ ಮರಿತಿಬ್ಬೇಗೌಡ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಬಾಬು/ಕೆಎಂ

## ಸಚಿವ ಸಂಪುಟದ ಸಭೆ

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ರಾಜ್ಯ ಸಚಿವ ಸಂಪುಟದ ಸಭೆಯು ಜನವರಿ 20 ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ವಿಧಾನ ಸೌಧ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟದ ಸಭಾ ಮಂದಿರದಲ್ಲಿ ನಡೆಯಲಿದೆ.

ಬಾಬು/ಕೆಎಂ

## ರಾಜ್ಯದ ಹೆದ್ದಾರಿ ರಸ್ತೆಗಳು ಮೇಲ್ದರ್ಜೆಗೆ

**ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :**

ರಾಜ್ಯದಲ್ಲಿನ 1656 ಕಿ.ಮಿ. ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ ಎಂದು ಲೋಕೋಪಯೋಗಿ ಸಚಿವ ಶ್ರೀ ಹೆಚ್.ಸಿ. ಮಹದೇವಪ್ಪ ಅವರು ತಿಳಿಸಿದರು.

ಇಂದು ತಮ್ಮ ಕಛೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಮುಖ್ಯಮಂತ್ರಿಗಳು, ರಾಜ್ಯದ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು 14 ರಾಜ್ಯ ಹೆದ್ದಾರಿಗಳಲ್ಲಿನ 1656 ಕಿ.ಮಿ. ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರ ಸರ್ಕಾರ ಇದರ ಅಧಿಸೂಚನೆ ಹೊರಡಿಸಿದೆ ಎಂದು ತಿಳಿಸಿದರು.

ಬಾಬು/ಕೆಪಿಪಿ/ಕೆಎಂ

## ಬೆಳ್ಳಿ ಸಿನಿಮಾ: ಬೆಳ್ಳಿಮಾತು ಕಾರ್ಯಕ್ರಮದಲ್ಲಿ ತಮಸ್ಸು ಚಿತ್ರ ಪ್ರದರ್ಶನ, ಸಂವಾದ

**ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಬೆಂಗಳೂರಿನಲ್ಲಿ ಪ್ರತಿ ಶನಿವಾರದಂದು ನಡೆಸುವ ಬೆಳ್ಳಿ ಸಿನಿಮಾ ಬೆಳ್ಳಿ ಮಾತು ಕಾರ್ಯಕ್ರಮದಲ್ಲಿ ಜನವರಿ 16 ರಂದು ಸಂಜೆ 4–00 ಗಂಟೆಗೆ ಮಿಲ್ಲರ್ಸ್ ರಸ್ತೆ, ಚಾಮುಂಡೇಶ್ವರಿ ಸ್ಟುಡಿಯೋಸ್‌ದಲ್ಲಿ ಡಾ: ಶಿವರಾಜ್‌ಕುಮಾರ್ ನಟಿಸಿರುವ "ತಮಸ್ಸು" ಬೆಳ್ಳಿ ಸಿನಿಮಾ ಪ್ರದರ್ಶನ ಏರ್ಪಡಿಸಲಾಗಿದೆ ಹಾಗೂ ಚಿತ್ರ ಕುರಿತಂತೆ ತಮಸ್ಸು ಚಿತ್ರದ ನಿರ್ಮಾಪಕ ಶ್ರೀ ಎಂ.ಎಸ್. ರವೀಂದ್ರ ಅವರೊಂದಿಗೆ ಬೆಳ್ಳಿ ಮಾತು ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಲನಚಿತ್ರ ಛಾಯಾಗ್ರಾಹಕ, ಶ್ರೀ ಬಿ.ಎನ್. ಭಾಸ್ಕರ್ ಹಾಗೂ ಚಲನಚಿತ್ರ ನಿರ್ದೇಶಕರ ಶ್ರೀ ಡಿ. ಸುಮನ ಕಿತ್ತೂರು ಉಪಸ್ಥಿತರಿರುವರು. ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಅಧ್ಯಕ್ಷತೆ ವಹಿಸುವರೆಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಹೆಚ್.ಬಿ.ಡಿ/ಬಾಬು/ಕೆಎಂ

## ದಕ್ಷಿಣ ರಾಜ್ಯಗಳ ಗ್ರಾಹಕ ವ್ಯವಹಾರಗಳ ಇಲಾಖೆಯ ಪ್ರಾದೇಶಿಕ ಸಭೆ

ಬೆಂಗಳೂರು, ಜನವರಿ 14, (ಕರ್ನಾಟಕ ವಾರ್ತೆ)

ದಕ್ಷಿಣ ರಾಜ್ಯಗಳ ಗ್ರಾಹಕ ವ್ಯವಹಾರಗಳ ಇಲಾಖೆಯ ಪ್ರಾದೇಶಿಕ ಸಭೆಯು ಜನವರಿ 16 ರಂದು ಬೆಳಿಗ್ಗೆ 10–00 ಗಂಟೆಗೆ ಬೆಂಗಳೂರಿನ ದಿ ಹೋಟೆಲ್ ಕ್ಯಾಪಿಟಲ್ ಸಭಾಂಗಣದಲ್ಲಿ ನಡೆಯಲಿದೆ. ಈ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣಾ ಖಾತೆ ಸಚಿವ ಶ್ರೀ ರಾಂವಿಲಾಸ್ ಪಾಸ್ವಾನ್ ವಹಿಸುವರು.

ಈ ಪ್ರಾಂತೀಯ ಸಭೆಯಲ್ಲಿ ದಕ್ಷಿಣ ವಲಯದ ರಾಜ್ಯಗಳಾದ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಪುದುಚೇರಿ ಹಾಗೂ ಲಕ್ಷದೀಪಗಳ ರಾಜ್ಯಮಟ್ಟದ ಆಹಾರ ಮತ್ತು ಗ್ರಾಹಕ ಸಂರಕ್ಷಣೆ(ನಾಗರಿಕ ಸರಬರಾಜು) ಕಾರ್ಯದರ್ಶಿಗಳು, ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್, ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ ಇವರುಗಳು ಪಾಲ್ಗೊಳ್ಳುವರು.

ಬಾಬು/ಕೆಎಂ

## ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಆಯ್ಕೆ ಸಮಿತಿ ಪ್ರಕಟ

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ರಾಜ್ಯ ಪತ್ರಿಕೋದ್ಯಮದ ಅತ್ಯುನ್ನತ ಪ್ರಶಸ್ತಿಗಳಾದ ಟೀಯೆಸ್ಸಾರ್ ಸ್ಮಾರಕ ಹಾಗೂ ಮೊಹರೆ ಹಣಮಂತರಾಯ ಪ್ರಶಸ್ತಿಗೆ 2014 ಮತ್ತು 2015 ನೇ ಸಾಲಿನ ಕ್ಯಾಲೆಂಡರ್ ವರ್ಷದಲ್ಲಿ ಅರ್ಹ ಪತ್ರಕರ್ತರನ್ನು ಆಯ್ಕೆ ಮಾಡಲು ಸರ್ಕಾರ ಆಯ್ಕೆ ಸಮಿತಿ ರಚಿಸಿ ಆದೇಶಿದೆ.

ನಿವೃತ್ತ ನ್ಯಾಯಮೂರ್ತಿ ಶ್ರೀ ಹೆಚ್. ಎನ್. ನಾಗಮೋಹನ್ ದಾಸ್ ಅಧ್ಯಕ್ಷರಾಗಿ, ಶ್ರೀ ರುದ್ರಣ್ಣ ಹರ್ತಿಕೋಟೆ, ಮುಖ್ಯ ವರದಿಗಾರರು, ವಿಜಯವಾಣಿ, ಶ್ರೀ ಸರಜೂ ಕಾಟ್ಕರ್, ಹಿರಿಯ ಪತ್ರಕರ್ತರು, ದಿ ಹಿಂದೂ ಆಂಗ್ಲ ದಿನ ಪತ್ರಿಕೆ, ಕಲಬುರಗಿ, ಶ್ರೀಮತಿ ಸಿ.ಜಿ. ಮಂಜುಳಾ, ಸಹ ಸಂಪಾದಕರು, ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ ಇವರುಗಳು ಸದಸ್ಯರುಗಳಾಗಿ ಹಾಗೂ ಶ್ರೀ ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು ಇವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮಮತ/ಕೆಎಂ

## ಇಂಧನ ಉಳಿತಾಯ ವರ್ಷಾಚರಣೆ: ಇಂಧನ ಸಚಿವರು

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ಇಂಧನ ಇಲಾಖೆಯು ಈ ವರ್ಷವನ್ನು ವಿದ್ಯುತ್ ಉಳಿತಾಯ ವರ್ಷವೆಂದು ಆಚರಿಸಲು ತೀರ್ಮಾನಿಸಲಾಗಿದೆ ಎಂದು ಇಂಧನ ಸಚಿವ ಶ್ರೀ ಡಿ. ಕೆ. ಶಿವಕುಮಾರ್ ಅವರು ತಿಳಿಸಿದರು.

ವಿಧಾನ ಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಇಂಧನ ಇಲಾಖೆಯಿಂದ ಯಾವ ಗ್ರಾಹಕರಿಗೂ ವಿದ್ಯುತ್ ನಿಯಂತ್ರಣ ಮಾಡಿ ಎಂದು ಹೇಳುವುವಿದಲ್ಲ ಆದರೂ ವಿದ್ಯುತ್ ಉಳಿತಾಯ ಮಾಡಿದರೆ ಒಳಿತು ಎಂದರು.

ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗಳು, ಗ್ರಾಮಪಂಚಾಯತಿಗಳು ಹಾಗೂ ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಎಲ್‌ಸಿಡಿ ಬಲ್ಪ್‌ಗಳನ್ನು ಬಳಸಲು ತಿಳಿಸಲಾಗುವುದು ಹಾಗೂ ಕೈಗಾರಿಕೆಗಳು ವಿದ್ಯುತ್ ಉಳಿತಾಯ ಮಾಡುವಂತೆ ಸೂಚಿಸಲಾಗುವುದೆಂದರು.

ಇಂಧನ ಇಲಾಖೆಯಲ್ಲಿರುವ ವಿದ್ಯುತ್ ಸಾಮಗ್ರಿಗಳನ್ನು ಲೆಕ್ಕಪರಿಶೋಧನೆಗೆ ಒಳಪಡಿಸಲಾಗುವುದು, ಅಲ್ಲದೆ ಇಂಧನ ಇಲಾಖೆಯಲ್ಲಿ 6000 ಲೈನ್‌ಮನ್ ಹುದ್ದೆ ಸೇರಿದಂತೆ 8000 ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಲಾಗುವುದೆಂದು ತಿಳಿಸಿದರು.

ಬಾಬು/ಕೆಪಿಪಿ/ಕೆಎಂ

## ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ

ಬೆಂಗಳೂರು, ಜನವರಿ 14 ( ಕರ್ನಾಟಕ ವಾರ್ತೆ ) :

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:17-01-2016ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಸ್ಕಂದ ಕಲಾಮೇಳದ ರತ್ನಾ ಮತ್ತು ತಂಡ, ಸಕಲೇಶಪುರ ಇವರಿಂದ ಜನಪದ ಗೀತೆ ಮತ್ತು ರಂಗಗೀತೆಗಳ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಹನುಮಂತ ನಾಯಕ್ ಮತ್ತು ತಂಡ, ಹಾಸನ ಇವರಿಂದ ಭಾವಗೀತೆ ಮತ್ತು ಜನಪದ ಗೀತೆ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

3. ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
5. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ–ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
7. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
8. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

### I.ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- **ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಸಮೃದ್ಧಿ ಸಂಸ್ಥೆ ವತಿಯಿಂದ ಸಮೃದ್ಧಿ ಸ್ಕೂಲ್ ಆಪ್ ಡ್ಯಾನ್ಸ್ ರವರಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಬೆಳಿಗ್ಗೆ 08.00 ಗಂಟೆಯಿಂದ 09.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ಕುಮಾರಿ ಸವ್ಯಶ್ರೀ ಮತ್ತು ಸಾಯಿ ವಂಶಿರವರಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**
- **ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಅಕ್ಷಯ ಫೌಂಡೇಷನ್ ರವರ ಸಹಯೋಗದೊಂದಿಗೆ ಡಾ. ಎನ್.ಸಿ. ಚಂದ್ರಪ್ಪ, ಮಾಲೂರು ರವರಿಂದ ಗುಲ್ವಾಡಿ ವೆಂಕಟರಾಯರ ಸಾಹಿತ್ಯ ಪರಿಚಯ ಕುರಿತು ಕನ್ನಡ ಉಪನ್ಯಾಸ ಕಾರ್ಯಕ್ರಮ ಹಾಗೂ ಶ್ರುತಿ, ಟಿ, ಎ. ಅವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

### II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- **ಬೆಳಿಗ್ಗೆ 6.00 ರಿಂದ ಸಂಜೆ 6.00 ಘಂಟೆಯವರೆಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಗಮ ನಿಯಮಿತ ರವರ ವತಿಯಿಂದ ಎನರ್ಜಿ ಎಫಿಶಿಯೆನ್ಸಿ ಸರ್ವಿಸಸ್ ಲಿಮಿಟೆಡ್ (EESL) ರವರ ಸಹಯೋಗದೊಂದಿಗೆ ಡೆಲ್ಪ್ (DELP) ಕಾರ್ಯಕ್ರಮದ ಮುಖಾಂತರ ನಾಡಿನ ಜನತೆಗೆ ಪ್ರತಿ ಬಲ್ಬ್ ಗೆ ರೂ.100 ರಂತೆ 9 ವ್ಯಾಟ್ LED ಬಲ್ಬ್ ಗಳನ್ನು ವಿತರಿಸಲಾಗುತ್ತಿದ್ದು, 2 ಕಿ.ವ್ಯಾ. ವರೆಗೆ ಗರಿಷ್ಠ 5 ಬಲ್ಬ್ ಗಳನ್ನು ಹಾಗೂ 2.ಕಿ.ವ್ಯಾ. ಗಿಂತ**

ಹೆಚ್ಚು ಇದ್ದರೆ ಗರಿಷ್ಠ 10 ಬಲ್ಬ್ ಗಳನ್ನು ವಿತರಿಸಲಾಗುವುದು. ಸಾರ್ವಜನಿಕರು ಇತ್ತೀಚಿನ ವಿದ್ಯುತ್ ಬಿಲ್ ಪ್ರತಿ , ವಿಳಾಸದ ಚೀಟಿ ಹಾಗೂ ಗುರುತಿನ ಚೀಟಿಯೊಂದಿಗೆ ಪೂರ್ಣ ಮುಂಗಡ ಪಾವತಿ ಮಾಡಿ ಬಲ್ಬ್ ಗಳನ್ನು ಪಡೆಯಬಹುದಾಗಿದೆ.

- ಬೆಳಿಗ್ಗೆ 6.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ವಿದ್ಯಾರಣ್ಯ ಸಂಸ್ಥೆಯ ಸ್ವದಾರ ಯೋಜನೆಯಡಿ ಫಲಾನುಭವಿಗಳು ಉತ್ಪಾದಿಸುತ್ತಿರುವ ವಸ್ತುಗಳಾದ ಮೇಣದಬತ್ತಿ, ಪೊರಕೆ, ಮ್ಯಾಟ್‌ಗಳು ಮತ್ತು ಉಣ್ಣೆಯ ವಿವಿಧ ವಸ್ತುಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.

# 8 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಪ್ರತಿನಿಧಿ ನೋಂದಣಿ ಕೇಂದ್ರಗಳು

ಬೆಂಗಳೂರು, ಜನವರಿ 14, (ಕರ್ನಾಟಕ ವಾರ್ತೆ)

ರಾಜ್ಯ ಸರ್ಕಾರವು ಕರ್ನಾಟಕ ಚಲನಚಿತ್ರ ಅಕಾಡೆಮಿ ಮತ್ತು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ಜನವರಿ 28 ರಿಂದ ಫೆಬ್ರವರಿ 4 ರವರೆಗೆ ಬೆಂಗಳೂರು ಹಾಗೂ ಮೈಸೂರಿನಲ್ಲಿ ನಡೆಯಲಿದೆ. ಬೆಂಗಳೂರಿನಲ್ಲಿ ರಾಜಾಜಿನಗರದ ಓರಿಯನ್ ಮಾಲ್‌ನ 11 ಬೆಳ್ಳಿ ಪರದೆಗಳ ಮೇಲೆ ಚಿತ್ರೋತ್ಸವದ ಚಿತ್ರಗಳು ಮೂಡಿಬರಲಿದೆ. ಹಾಗೆಯೇ ಮೈಸೂರಿನ ಐನಾಕ್ಸ್ ಚಲನಚಿತ್ರಮಂದಿರದ 4 ಬೆಳ್ಳಿ ಪರದೆಗಳಲ್ಲಿ ಚಲನಚಿತ್ರ ಪ್ರದರ್ಶಿತಗೊಳ್ಳಲಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಪ್ರತಿನಿಧಿಗಳಾಗಿ ನೋಂದಣಿ ಕೇಂದ್ರಗಳು:

1) ಬೆಂಗಳೂರಿನ ಚಿತ್ರ್ಯೋತ್ಸವ ಕಾರ್ಯಾಲಯ ಕರ್ನಾಟಕ ಚಲನಚಿತ್ರ ಅಕಾಡೆಮಿ, . . ಬಾದಾಮಿ ಹೌಸ್, ಕಾರ್ಪೋರೇಷನ್ ಎದುರು, ಎನ್.ಆರ್. ಚೌಕ

2) ಸುಚಿತ್ರ ಫಿಲಂ ಸೊಸೈಟಿ, ಬನಶಂಕರಿ 2 ನೇ ಹಂತ, ಬೆಂಗಳೂರು

3) ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕ್ರೆಸೆಂಟ್ ರಸ್ತೆ, ಶಿವಾನಂದ ವೃತ್ತದ ಸಮೀಪ

. 4) ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ಭಗವಾನ್ . ಮಹಾವೀರ ರಸ್ತೆ, ಬೆಂಗಳೂರು.

5)ಮೈಸೂರಿನಲ್ಲಿ ವಾರ್ತಾ ಭವನ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, . ಧನ್ವಂತರಿ ರಸ್ತೆ

ಈ ಚಲನಚಿತ್ರೋತ್ಸವದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಲು ಇಚ್ಛಿಸುವ ಸಾರ್ವಜನಿಕರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಸಾರ್ವಜನಿಕರಿಗೆ 600 ರೂ. ಆಗಿದೆ. ಸಿನಿ ಕ್ಲಬ್, ಸಿನಿ ಸೊಸೈಟಿ ಸದಸ್ಯರು, ಚಿತ್ರೋದ್ಯಮದವರು, ಹಿರಿಯ ನಾಗರೀಕರು ಮತ್ತು 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 300 ರೂ.ಗಳ ಪ್ರವೇಶ ಶುಲ್ಕವನ್ನು ನಿಗದಿಪಡಿಸಲಾಗಿದೆ. ಚಲನಚಿತ್ರೋತ್ಸವದಲ್ಲಿ ಪ್ರತಿನಿಧಿಗಳಾಗಿ ಹೆಸರು ನೋಂದಣಿ ಮಾಡಿದವರು ಬೆಂಗಳೂರು ಮತ್ತು ಮೈಸೂರು ನಗರಗಳ ಚಿತ್ರಮಂದಿರಗಳಲ್ಲಿ ಪ್ರತಿನಿಧಿ ಪಾಸ್ ತೋರಿಸಿ ಚಲನಚಿತ್ರ ವೀಕ್ಷಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ವಿಳಾಸ www.biffes.in ಅನ್ನು ಸಂಪರ್ಕಿಸಬಹುದೆಂದು ಶ್ರೀ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.

ಹೆಚ್‌ಬಿಡಿ/ಬಾಬು/ಕೆಎಂ

## ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ:

# ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳು

ಬೆಂಗಳೂರು, ಜನವರಿ 14, 2016 (ಕರ್ನಾಟಕ ವಾರ್ತೆ)

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರವು ಆದೇಶದಲ್ಲಿ ತಿಳಿಸಿರುವ ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳ ಮಾರ್ಗಸೂಚಿಗಳು ಇಂತಿವೆ.

ಜನವರಿ 15 ರಂದು "ಸಾರ್ವತ್ರಿಕ ಸಾಕ್ಷರತೆಯಲ್ಲಿ ಯುವಜನತೆಯ ಪಾತ್ರದ " ಕುರಿತು ಭಾಷಣ ಸ್ಪರ್ಧೆ, ಏರ್ಪಡಿಸುವುದು. ಮತ್ತು ರಾಷ್ಟ್ರೀಯ ಮಹತ್ವದ ವಿಷಯಗಳ ಕುರಿತು ಯುವಕರಿಂದ ಕೌಶಲ್ಯಗಳ ಪ್ರದರ್ಶನ.

ಜನವರಿ 16 ರಂದು ರಾಷ್ಟ್ರೀಯ ಸೇವಾ ದಿನವಾಗಿ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರನ್ನು ಒಳಗೊಂಡ ಪರಿಸರ ಸಂರಕ್ಷಣೆ ಕುರಿತದ ವಿಶೇಷ ಕಾರ್ಯಕ್ರಮ ಏರ್ಪಡಿಸುವುದು. ಹಳ್ಳಿ ಮತ್ತು ನಗರಗಳ ಸ್ವಚ್ಚತೆ ಕುರಿತಾಗಿ ಸ್ವಯಂ ಪ್ರೇರಣೆ ಮೇಲೆ ಶ್ರಮದಾನ ಹಾಗೂ ವಿಶೇಷ ಘಟಕ ಕಾರ್ಯಕ್ರಮ. ನೇತ್ರದಾನ, ರಕ್ತದಾನ ಕುರಿತಾಗಿ ಅರಿವು ಮೂಡಿಸುವ

ಕಾರ್ಯಕ್ರಮಗಳು, ನೀರಿನ ಕೊಳ, ರಸ್ತೆ ಕೆಲಸ ಕಾರ್ಯಗಳ ಸಂರಕ್ಷಣೆ ಬಗ್ಗೆ ಯುವಜನತೆಯನ್ನು ಬಳಸಿಕೊಳ್ಳುವ ಕಾರ್ಯಕ್ರಮ ಏರ್ಪಡಿಸುವುದು.

ಜನವರಿ 17 ರಂದು ದೈಹಿಕ ದೃಢತೆ ಅಂಗವಾಗಿ ಗ್ರಾಮೀಣ ಕ್ರೀಡೆ, ವಿಶೇಷ ಕ್ರೀಡೆಗೆ ಪ್ರೋತ್ಸಾಹ ನೀಡುವುದು. ಸಾಹಸ ಕ್ರೀಡೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಜನವರಿ 18 ರಂದು ಶಾಂತಿಗಾಗಿ ಯುವಜನತೆ ದಿನ ಆಚರಿಸಲು ದೇಶದಲ್ಲಿ ನೆಲೆಸಲು ಸಮಾವೇಶ ಹಾಗೂ ಚರ್ಚೆಗಳನ್ನು ಆಯೋಜಿಸುವುದು. ಕ್ರೀಡೆಗಳ ಆಯೋಜನೆ ಮಾಡುವುದು.

ಜನವರಿ 19 ರಂದು ಕೌಶಲ್ಯ ಅಭಿವೃದ್ಧಿ ನಿಮಿತ್ತ ಯುವಜನರು ತಯಾರಿಸಿದ ಕೌಶಲ್ಯ ಅಭಿವೃದ್ಧಿ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು, ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು, ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವಜನತೆಗೆ ತಲುಪಿಸುವುದು ಮತ್ತು ರಾಷ್ಟ್ರೀಯ ಯುವ ಸಪ್ತಾಹದ ಕ್ರೋಢಿಕರಣ ಮಾಡುವುದು.

ರಾಜ್ಯದ ಸರ್ಕಾರದ ಆದೇಶದಲ್ಲಿ ಮೇಲೆ ಕಾಣಿಸಿದ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಜನವರಿ 19 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನಾಗಿ ಆಚರಿಸುವುದು.

ಮಾರ್ಗಸೂಚಿಗಳ ಅನುಸಾರ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಪ್ರತಿ ವರ್ಷ ತಪ್ಪದೇ ಕಡ್ಡಾಯವಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ

*"ಆಂಡ್ ದಿ ಲಾಸ್ಟ್ ಷಲ್ ಬಿ ದಿ ಫಸ್ಟ್ ಜಿ.ಆರ್.ಈರಣ್ಣವರ್ಕ್ಸ್ 1995–2015"*

**ಉದ್ಘಾಟನಾ ಸಮಾರಂಭ**

**ದಿನಾಂಕ: 16 ಜನವರಿ 2016, ಶನಿವಾರ ಸಂಜೆ 6.00 ಗಂಟೆ**

**ಸ್ಥಳ: ರಾಷ್ಟ್ರೀಯಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು**

**#49 ಮಾನಿಕ್ಯವೇಲು ಮ್ಯಾನ್‌ಷನ್, ಅರಮನೆರಸ್ತೆ, ಬೆಂಗಳೂರು – 560052**
**ದೂರವಾಣಿ: +91 080 22342338, ಟೆಲಿಫ್ಯಾಕ್ಸ್: +91 080 22201027**
**ಈ–ಮೇಲ್: ngma.bengaluru @ gmail.com, ವೆಬ್‌ಸೈಟ್:**
**www.ngmaindia.gov.in/ngma_bangaluru.asp**
**twitter.com/NGMABengaluru**

*ಓರ್ವ ಸಂಪೂರ್ಣ ಮುಗ್ಧನಾಗಿರುವ ವ್ಯಕ್ತಿಯುತನ್ನ ಶತ್ರುಗಳನ್ನೂ, ಒಳಗೊಂಡಂತೆ ಇತರರ ಒಳಿತಿಗಾಗಿ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೋ ಅವನು ವಿಶ್ವದಉತ್ತಮ ವ್ಯಕ್ತಿಯಾಗುತ್ತಾನೆ. ಇದು ಸಮರ್ಪಕಕ್ರಿಯೆ.*

*– ಮಹಾತ್ಮಾಗಾಂಧಿ*

ರಾಷ್ಟ್ರೀಯಆಧುನಿಕ ಕಲಾ ಸಂಗ್ರಹಾಲಯ ಬೆಂಗಳೂರು, ಸಂಸ್ಕೃತಿ ಸಚಿವಾಲಯ ಭಾರತ ಸರ್ಕಾರವು ಮುಂಬೈನ ಗಿಲ್ಡ್‌ಆರ್ಟ್‌ಗ್ಯಾಲರಿಯ ಸಹಯೋಗದಲ್ಲಿಎಲ್ಲಾಕಲಾಕಾರರಿಗೆ, ಕಲಾಪ್ರಿಯರಿಗೆ ಮತ್ತು ಸಾರ್ವಜನಿಕರಿಗಾಗಿ ಸಾಂಸ್ಕೃತಿಕ ಸಿದ್ಧಾಂತಿ, ಕವಿ ಮತ್ತು ಸ್ವತಂತ್ರ ಸಂಗ್ರಹಕಾರರಾದ ಶ್ರೀ ರಂಜಿತ್ ಹೊಸಕೋಟೆಅವರಿಂದ ಸಂಯೋಜಿಸಲಟ್ಟ *"ಆಂಡ್ ದಿ ಲಾಸ್ಟ್ ಷಲ್ ಬಿ ದಿ ಫಸ್ಟ್"* ಜಿ.ಆರ್.ಈರಣ್ಣಅವರ 1995–2015ರ ಅವಧಿಯಲ್ಲಿನ ಕಲಾಕೃತಿಗಳ ಪ್ರದರ್ಶನವನ್ನು ಹೆಮ್ಮೆಯಿಂದಅರ್ಪಿಸುತ್ತಿದೆ.

**'*ಆಂಡ್ ದಿ ಲಾಸ್ಟ್ ಷಲ್ ಬಿ ದಿ ಫಸ್ಟ್‌ಜಿ.ಆರ್.ಈರಣ್ಣವರ್ಕ್ಸ್* 1995–2015'** ಕಲಾ ಪ್ರದರ್ಶನದಉದ್ಘಾಟನಾ ಸಮಾರಂಭವು ದಿನಾಂಕ 16 ಜನವರಿ 2016, ಶನಿವಾರ ಸಂಜೆ 6.00 ಗಂಟೆಗೆರಾಷ್ಟ್ರೀಯಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು ಇಲ್ಲಿ ನಡೆಯಲಿದೆ.ಅಂತಾರಾಷ್ಟ್ರೀಯಖ್ಯಾತಿಯ ಚಲನಚಿತ್ರ ನಿರ್ದೇಶಕರಾದ ಶ್ರೀ ಗಿರೀಶ್ ಕಾಸರವಳ್ಳಿ ಅವರು ಪ್ರದರ್ಶನವನ್ನುಉದ್ಘಾಟಿಸಲಿದ್ದಾರೆ. ಶ್ರೀಮತಿ ಸಾಲುಮರದತಿಮ್ಮಕ್ಕಅವರಗಣ್ಯ ಉಪಸ್ಥಿತಿಯಲ್ಲಿ ಶ್ರೀ ಸುಧಾಕರ್‌ರಾವ್, ಅಧ್ಯಕ್ಷರು, ಸಲಹಾ ಸಮಿತಿ, ರಾ.ಆ.ಕ.ಸಂ., ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

*"ಪ್ರಸಕ್ತ ಮಾದರಿಯ ಸಂಗ್ರಹಾಲಯ ಸ್ತರದ ಪ್ರದರ್ಶನವುಒಬ್ಬಕಲಾವಿದನ ಸುಧೀರ್ಘ ಪ್ರಯಾಣದ ನಡುವಿನ ವ್ಯಾಪ್ತಿ ಹಾಗೂ ಸಂಧರ್ಭಗಳನ್ನು ಗುರುತಿಸುವ ಪ್ರಯತ್ನವಾಗಿದೆ.ಕಲಾವಿದ ಶ್ರೀ ಈರಣ್ಣಅವರು ಭಾರತೀಯಕಲಾಪ್ರಪಂಚಕ್ಕೆಹೆಜ್ಜೆಇಟ್ಟಂದಿನಿಂದಅವರು ಮೂಡಿಸಿದ ಹೆಜ್ಜೆಗುರುತುಗಳು ಹಾಗೂ ಈ ಕ್ಷೇತ್ರಕ್ಕೆಅವರು ಸಲ್ಲಿಸಿದ ಅಮೂಲ್ಯ ಕೊಡುಗೆಗಳನ್ನು ದಾಖಲಿಸುವ ಪ್ರದರ್ಶನವುಅವರ ವೈವಿಧ್ಯಪೂರ್ಣ ಕೃತಿಗಳ ಬಿತ್ತರದಿಂದ ಮೂರ್ತಗೊಂಡಿದೆ.ಪ್ರದರ್ಶನವುಕರ್ನಾಟಕದಲ್ಲಿಕಲಾವಿದರ ವಿದ್ಯಾರ್ಥಿದೆಸೆಯಆರಂಭದಕಾಲದಕೃಷಿಯನ್ನು ಹಾಗೂ ಬೆಳವಣಿಗೆಯ ಮಜಲುಗಳನ್ನು ಬಿಂಬಿಸುವುದಲ್ಲದೆ ಮುಂದಿನ ದಿನಗಳಲ್ಲಿ ದೆಹಲಿ ಮೂಲಕ ಕಲಾವಿದರಾಗಿ ಸಮಕಾಲೀನ ಜಾಗತಿಕಕಲಾಸಂದರ್ಶನದಕೃಷಿಯನ್ನೂ ಪ್ರಕಟಗೊಳಿಸುತ್ತದೆ."*

– ರಂಜಿತ್ ಹೊಸಕೋಟೆ

ಒಬ್ಬಕಲಾವಿದನಎರಡು ದಶಕಗಳ ಕಲಾ ಪಯಣದ ಮಧ್ಯ ಬಿಂದುವಿನಲ್ಲಿ ಕಾಣಸಿಗುವ ತಿರುವುಗಳನ್ನು, ಬದಲಾವಣೆಗಳನ್ನು ಗುರುತಿಸುವ ಹಾಗೂ ಅವನ ಕ್ರಿಯಾತ್ಮಕ ಪ್ರಯಾಣದ ಆಳ ಹರಹುಗಳನ್ನು ಪ್ರತಿಬಿಂಬಿಸುವ ಅವಕಾಶವನ್ನು ಕೆಲವು ಅಪರೂಪದ ಕಲಾಕೃತಿಗಳನ್ನು ಪ್ರದರ್ಶಿಸುವ ಮೂಲಕ ಅವನನ್ನುಅಭಿನಂದಿಸುವ ಕ್ರಿಯೆಇದಾಗಿದೆ. ಕಾಲನುಕ್ರಮದಲ್ಲಿ ವಿವಿಧ ನೋಡುಗರು ಈ ಕೃತಿಗಳ ಬಗ್ಗೆ ವ್ಯಕ್ತಪಡಿಸಿದ ವಿವಿಧರೀತಿಯ ಪ್ರತಿಕ್ರಿಯೆಗಳನ್ನು ಸಮಗ್ರವಾಗಿ ವೀಕ್ಷಿಸುವ ಅವಕಾಶವೂ ಇದೆ.ಇದರಿಂದಕಲಾವಿದನಿಗೆತನ್ನ ಕೃತಿಗಳನ್ನು ಪರಾಮರ್ಶಿಸುವ ಹಾಗೂ ಮುಂದಿನ ಸೃಷ್ಟಿಗಳಿಗೆ ನಾಂದಿ ಹಾಡುವ ಅವಕಾಶವೂ ದೊರೆಯುತ್ತದೆ.

ಶ್ರೀ ಈರಣ್ಣಅವರ ಕೃತಿಗಳು ವಿಷಯಾಧಾರಿತ ವಸ್ತುನಿಷ್ಠೆ ಹಾಗೂ ಅವುಗಳನ್ನು ಪ್ರತಿಬಿಂಬಿಸುವ ರೀತಿಗೆಇರುವಅಂತರ್ಗತ ಸಂಪರ್ಕವನ್ನು ಬಿತ್ತರಿಸುತ್ತದೆ.ಅವರ ಕೃತಿಗಳು ನಿರ್ದಿಷ್ಟ ಸಾಮಾಜಿಕ ಮತ್ತುರಾಜತಾಂತ್ರಿಕ ಪ್ರಶ್ನೆಗಳಾದ ಸಮಾನತೆ, ಜೀವನೋಪಾಯ, ಪರಿಸರ ಹಾಗೂ ಇಂದಿನ ಪ್ರಕ್ಷುಬ್ಧ ಸಮಾಜದಲ್ಲಿ ಸಾಮಾನ್ಯ ವ್ಯಕ್ತಿಯ ಸ್ಥಾನವನ್ನು ನಿರ್ದೇಶಿಸುತ್ತದೆ.ಆದರೂಇದನ್ನುಕಾವ್ಯಾತ್ಮಕವಾಗಿ ಮತ್ತುತಾತ್ವಿಕವಾಗಿ ಪ್ರತಿಬಿಂಬಿಸುವುದುಅವರ ಕೃತಿಗಳ ವೈಶಿಷ್ಟವಾಗಿದೆ.ಅವರಇತ್ತೀಚಿನಕೃತಿಯಾದ 'ಗಾಡ್ಅಂಡ್ಗನ್ಸ್ (ವಿಟ್‌ನೆಸ್)' ನಲ್ಲಿಚಿತ್ರಿತವಾಗಿರುವಒಂದುಕಾರ್ಪೆಟ್, ದಿನಬಳಕೆಯ ಒಂದು ಸುಂದರ ವಸ್ತು ಇವು ಶೋಷಣೆ ಹಾಗೂ ಸ್ಥಿತಿಸ್ಥಾಪಕತ್ವದ ತಾತ್ವಿಕ ಅಂಶಗಳನ್ನು ಪ್ರತಿಬಿಂಬಿಸುತ್ತದೆ.ಕಾರ್ಪೆಟ್‌ಅನುಭವಕ್ಕೆ ಸಾಕ್ಷಿಯಾದರೆ, ವಸ್ತು, ಕಾಲ ಮತ್ತು ಮನುಷ್ಯನ ಕ್ರಿಯೆಗಳಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.ಪ್ರಾರ್ಥನೆಇರಲಿ ಅಥವಾಕ್ರೌರ್ಯವಿರಲಿ ಕಾರ್ಪೆಟಿನ ಹರುಕುಗಳು ಎಲ್ಲ ಮಾನವ ಪ್ರಯತ್ನಗಳ ರೂಪಕವಾಗಿ ನಿಲ್ಲುತ್ತವೆ.

*"ಈರಣ್ಣ (ಜನನ 1970) ಅವರ 20 ವರ್ಷಗಳ ಅವಧಿಯ ಕಲಾಕೃತಿಗಳನ್ನು ನೋಡಿದಾಗಅವರುತಮ್ಮನ್ನುಒಡ್ಡಿಕೊಂಡಕ್ರಿಯಾತ್ಮಕ ಬದಲಾವಣೆಗಳ ವೈವಿಧ್ಯತೆಗೆ ನಾನು ವಿಸ್ಮಯಗೊಂಡಿದ್ದೇನೆ. ಅವರುತಮ್ಮ ಸಾಮಾಜಿಕ ಕಳಕಳಿಯನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸುವರೀತಿಜೊತೆಗೆಅವರ ರಚನೆಗಳ ವಿನ್ಯಾಸ ಹಾಗೂ ಸಂಕೀರ್ಣತೆಗಳು ಅವರನ್ನುಒಬ್ಬ ವಿಶಿಷ್ಟ ಕಲಾವಿದನಾಗಿಗುರುತಿಸುತ್ತವೆ. ಅವರ ವರ್ಣಚಿತ್ರಗಳು ಸಂಕೇತ ರೂಪಗಳಾಗಿದ್ದರೂ ಅವು ಸ್ವತಂತ್ರ ಕೃತಿಗಳಾಗಿ ಶಿಲ್ಪ ಹಾಗೂ ಪ್ರತಿಷ್ಠಾಪನಾ ಕೃತಿಗಳಾಗಿ ರೂಪುಗೊಂಡಿದೆ."*

*–ರಂಜಿತ್ ಹೊಸಕೋಟೆ*

ಕರ್ನಾಟಕದ ವಿಜಯಪುರಜಿಲ್ಲೆಯ ಸಿಂದಗಿಯಲ್ಲಿ 1970ರಲ್ಲಿ ಜನಿಸಿದ ಶ್ರೀ ಈರಣ್ಣನವರು 1992ರಲ್ಲಿ ಗುಲ್ಬರ್ಗದ ವಿಷುಯಲ್‌ಆರ್ಟ್‌ಕಾಲೇಜಿನಲ್ಲಿ ಲಲಿತಕಲಾ ಪದವಿಯನ್ನು ಪಡೆದು ನವದೆಹಲಿಯಕಾಲೇಜ್‌ಆಫ್‌ಆರ್ಟ್ಸ್‌ನಲ್ಲಿ ವರ್ಣಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.1999ರಲ್ಲಿ ಬ್ರಿಟಿಷ್‌ಕೌನ್ಸಿಲ್‌ನಿಂದಚಾರ್ಲ್ಸ್ ವಾಲ್ಲೇಸ್ ಶಿಷ್ಯವೇತನವನ್ನು ಪಡೆದ ಮತ್ತು ಲಂಡನ್‌ನ ವಿಂಬಲ್ಡನ್ ಸ್ಕೂಲ್‌ಆಫ್‌ಆರ್ಟ್‌ನಲ್ಲಿ ವಸತಿಕಲಾವಿದರಾಗಿದ್ದ ಹೆಮ್ಮೆಇವರದು. ಮುಂದಿನ ವರ್ಷಗಳಲ್ಲಿ '*ಎಬಿಪಿಎಫ್ ಫೌಂಡೇಷನ್; ಸಿಗ್ನೇಚರ್ ಆರ್ಟ್ ಪ್ರೈಝ್, ಸಿಂಗಾಪುರ್; ಕೆ.ಕೆ.ಹೆಬ್ಬಾರ್*

*ಫೌಂಡೇಷನ್‌ಅವಾರ್ಡ್; ಎಂ.ಎಫ್.ಹುಸೇನ್ ಮತ್ತುರಾಮ್‌ಕುಮಾರ್ ಸೆಲೆಕ್ಷನ್‌ಅವಾರ್ಡ್‌ನ ಪ್ರತಿಭಾಶೋಧ ಪ್ರಶಸ್ತಿ*ಗಳು ಶ್ರೀ ಈರಣ್ಣರವರನ್ನು ಅರಸಿಬಂದ ಪ್ರಶಸ್ತಿಗಳಲ್ಲಿ ಕೆಲವು ಮಾತ್ರ.

ಈರಣ್ಣಅವರ ಕಲಾಕೃತಿಗಳು ಪ್ರೊ.ರಾಜೀವ್ ಲೋಚನ್‌ಅವರ ಸಂಯೋಜನೆಯಲ್ಲಿಚೀನಾದ ಬೀಜಿಂಗ್ ನಗರದ ಮಿನ್ಶೆಂಗ್‌ಆರ್ಟ್ ಮ್ಯೂಸಿಯಂ; ಪ್ರಿಯಾ ಪಾಲ್‌ಅವರ ಸಂಯೋಜನೆಯಲ್ಲಿ ನವದೆಹಲಿಯ ಹೆರಿಟೇಜ್‌ಟ್ರಾನಸ್ಪೋರ್ಟ್ ಮ್ಯೂಸಿಯಂ; ಪ್ಯಾರೀಸಿನ ಮ್ಯೂಸಿಯೋ ದೇ ಲಾ ಟೋಯಲೋದೇಜಾಯ್ ಎ ಸ್ಪೇಸ್‌ದ'ಆರ್ಟ್‌ಕಂಟೆಂಪೋರಿಯನ್; ಅಮೆರಿಕಾದಕ್ಯಾಲಿಫೋರ್ನಿಯಾದಲ್ಲಿನ ಸಾನ್‌ಜೋಸ್ ಮ್ಯೂಸಿಯಂ ಆಫ್‌ಆರ್ಟ್‌ನಲ್ಲಿ 'ರೂಟ್ಸ್‌ಇನ್ ದಿ ಏರ್, ಬ್ರಾಂಚ್‌ಸ್ ಬಿಲೋವ್, ಭಾರತದಆಧುನಿಕ ಮತ್ತು ಸಮಕಾಲೀನ ಕಲಾ ಪ್ರದರ್ಶನ'; ರೂಬಿನಾ ಕರೋಡೆಅವರ ಸಂಯೋಜನೆಯಲ್ಲಿ ನವದೆಹಲಿಯಕಿರಣ್ ನಾಡಾರ್ ಮ್ಯೂಸಿಯಂ ನಲ್ಲಿನ 'ಕ್ರಾಸಿಂಗ್: ಟೈಂಅನ್ ಫೋಲ್ಡೆಡ್' ಪ್ರದರ್ಶನ; ಅಮಿತ್ ಮುಖೋಪಾಧ್ಯಾಯ ಮತ್ತುಆಸ್ಕರ್‌ಆಶಾನ್‌ಅವರ ಸಂಯೋಜನೆಯಲ್ಲಿ ಸ್ವೀಡನ್‌ನ ಗೋಥೆನ್‌ಬರ್ಗ್‌ನಕಂಟೆಂಪರರಿಇಂಡಿಯನ್‌ಆರ್ಟ್‌ಇಲ್ಲಿ 'ಗೋ ಸೀ ಇಂಡಿಯಾ' ಪ್ರದರ್ಶನ; ನವದೆಹಲಿಯರಾ. ಆ. ಕ. ಸಂ.ಆಯೋಜಿಸಿದ 'ದಿ ಐ ಆಂಡ್ ದಿ ಮೈಂಡ್; ಭಾರತೀಯಕಲೆಯ ಹೊಸ ಆಯಾಮಗಳು' ಎಂಬ ಪ್ರದರ್ಶನ; ಸ್ವಿಟ್ಜರ್‌ಲ್ಯಾಂಡಿನ ದೇವೋಸ್‌ನಲ್ಲಿ ನಡೆದ ವಿಶ್ವಆರ್ಥಿಕ ಸಮಾವೇಶದಲ್ಲಿನ 'ದಿ ಇನಿಷಿಯೇಟಿವ್–ಲಾಜಿಕ್ ರಿವಿಸಿಟೆಡ್ ಫ್ರಂ ಓಸಿಯನ್ಸ್ ಕಲೆಕ್ಷನ್' ಅಲ್ಲದೇ ವಿಶ್ವದಇನ್ನಿತರ ಅನೇಕ ಸ್ಥಳಗಳಲ್ಲಿ ಪ್ರದರ್ಶಿಸಿಸಲ್ಪಟ್ಟಿದೆ.

*ಟೆಂಪೆರೆಡ್ ಬ್ರಾಂಚೆಸ್*, ಐಕಾನ್‌ಗ್ಯಾಲರಿ, ನ್ಯೂಯಾರ್ಕ್ –2014, *ಲಿಮ್‌ನಿಂಗ್ ಹೆಟೆರೋಟೊಪಿಯಾಸ್; ಎ ಜರ್ನಿಇನ್‌ಟು ಜಿ. ಆರ್. ಈರಣ್ಣಾಸ್ ಶಾಡೋಸ್‌ಆಫ್ ದಿ ಇನ್–ಬಿಟ್‌ವೀನ್*, ಗ್ಯಾಲರಿಎಸ್ಪೇಸ್, ನ್ಯೂಡೆಲ್ಲಿ 2012, *ಸ್ಕಾಫೋಲ್ಡಿಂಗ್ ದಿ ಅಬ್ಸೆಂಟ್*, ದಿ ಗಿಲ್ಡ್, ಮುಂಬಯಿ 2011, *ರಿಬ್ಬೆಡ್‌ರೂಟ್ಸ್*, ದಿ ಗಿಲ್ಡ್ ಮುಂಬಯಿ 2010, *ಬರ್ತ್‌ಆಫ್ ಬ್ಲೈಂಡ್ನೆಸ್*, ಸ್ಟೈನ್‌ಲೆಸ್‌ಗ್ಯಾಲರಿ ನ್ಯೂಡೆಲ್ಲಿ, *ದಿ ಡ್ಯಾನ್ಸರ್‌ಆನ್ ದಿ ಹಾರ್ಸ್*, ಬರ್ಕ್‌ಲೀ ಸ್ಕ್ವೇರ್‌ಗ್ಯಾಲರಿ, ಲಂಡನ್, 2007 ಇವು ಕಲಾವಿದ ಶ್ರೀ ಈರಣ್ಣಅವರಏಕವ್ಯಕ್ತಿಕೃತಿ ಪ್ರದರ್ಶನಗಳಲ್ಲಿ ಕೆಲವು.

ಈ ಪ್ರದರ್ಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ 17 ಜನವರಿ 2016ರಿಂದ 16 ಫೆಬ್ರವರಿ 2016 ರವರೆಗೆ ಪ್ರತಿದಿನ ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆಅವಕಾಶವಿದೆ.(ಸೋಮವಾರ ಹಾಗೂ ರಾಷ್ಟ್ರೀಯರಜಾದಿನಗಳನ್ನು ಹೊರತು ಪಡಿಸಿ.)

***And the last shall be the first: G. R. Iranna Works 1995-2015***
***Curated by RanjitHoskote***
**Inauguration ceremony: 6.00 pm, Saturday, 16th January 2016**

# at National Gallery of Modern Art, Bengaluru

#49, Palace Road, Bengaluru - 560052 , Telephone: +91 080 22342338, Tele Fax: +91 080 22201027, e-mail: ngma.bengaluru@gmail.com, Website: www.ngmaindia.gov.in/ngma_bangaluru.asp

"A man who was completely innocent offered himself as a sacrifice for the good of others, including his enemies, and became a ransom of the world. It was a perfect act."

- Mahatma Gandhi.

National Gallery of Modern Art, Bengaluru, Ministry of Culture, Government of India in collaboration with The Guild Art Gallery is proud to present a contemporary exhibition **And the last shall be the first: G. R. Iranna Works 1995-2015,** at NGMA Bengaluru curated by poet, cultural theorist and curator, RanjitHoskote.

The Exhibition 'And the last shall be the first: G. R. Iranna Works 1995-2015' will be inaugurated on Saturday, 16th January 2016 at 6.00 p.m. by Shri Girish Kasavalli, Film Director, Shri Sudhakar Rao, Chairman, Advisory commitiee, NGMA Bengaluru will be the Guest of Honor In the presence of Smt. SaalumaradaTimmakka.

"A museum-level exhibition such as the present one enables us to survey and contextualise the activity of an artist, as it were, in mid-passage. Our attempt, here, has been to bring together a variety of works that attest to Iranna's production since his earliest foray into the Indian art world, and spanning his increasing range and contribution to the scene. A vital subtext of the exhibition is Iranna's journey, both literally and in figurative terms, from his points of anchorage and inspiration during his upbringing and early student years in Karnataka, to the further unfolding of his sensibility as a Delhi-based artist working in the context of global contemporary art." – RanjitHoskote

*

The mid-career survey of an artist's work is also an opportunity to gather some of the key artworks of the last couple of decades, to note and mark the turning points and shifts taking place in his oeuvre, and to reflect deeply on this exciting and creative journey. Different viewers would bring a different response to this body of work, seen as a whole across time. For the artist, it could serve as a moment of reassessment and a point of departure for future explorations.

Iranna's body of work is connected by an underlying thread of reflection and thematic emphasis: it engages with specific social and political questions of equity, livelihood, the environment, and the place of the individual in a turbulent society. And yet it does so through means that are poetic and philosophical. In his recent work, God and Guns (Witness) the physicality of a carpet, a beautiful object associated with daily use, becomes symptomatic of the metaphysical aspects of suffering and resilience, with the carpet becoming a witness to experience, an object marked by shifts in time, space and human action. Its wear and tear stands testimony to all human actions, whether it is prayer or violence.

"While reflecting on a twenty-year period in the oeuvre of G. R. Iranna (born 1970), I find myself marvelling at the variety of creative displacements to which he has subjected himself: he has negotiated between an account of the social predicament underwritten by the figure, yet has also revelled in the pleasures of abstraction and pattern; he has elaborated a vibrant form of compressed allegorical narrative in his paintings, yet has boldly translated his concerns with freedom, oppression and the desire for emancipation into sculpture and installation." – RanjitHoskote

*

G. R. Iranna was born in Sindgi, Bijapur, Karnataka, in 1970. He received his Bachelor of Fine Arts Degree from the College of Visual Art, Gulbarga, 1992, and a Master's Degree in Painting from the College of Art, New Delhi, 1994. He was awarded the Charles Wallace Scholarship by the British Council in 1999 and was an artist-in-residence at the Wimbledon School of Art, London. Over the years, he has received many awards including the ABPF

Foundation, Signature Art Prize, Singapore; the K. K. Hebbar Foundation Award; and In Search of Talent, M. F. Husain and Ram Kumar Selection Award.
Iranna’s museum and institutional shows include *The Eye and the Mind: New Interventions in Indian Art*, organised by National Gallery of Modern Art, New Delhi, at the Minsheng Art Museum, Beijing, China, curated by Prof.  Rajeev Lochan; the Heritage Transport Museum, New Delhi, curated by Priya Pall; Museo de la toile de JouyEspace d’art contemporain, Paris; Roots in the Air, Branches Below: Modern & Contemporary Art from India,  San Jose Museum of Art, San Jose, California, USA;  Crossings: Time Unfolded,  Kiran Nadar Museum of Art (KNMA), New Delhi, curated by  RoobinaKarode; Go See India, curated by Amit Mukhopadhyay and Oscar Aschan, Contemporary Indian Art, Gothenburg, Sweden; The Intuitive-Logic Revisited, from Osians Collection at The World Economic Forum, Davos, Switzerland, among numerous others.
Iranna’s solo shows include Tempered Branches, Aicon Gallery, New York, 2014; Limning Heterotopias: A Journey into G.R. Iranna's Shadows of the In□Between, Gallery Espace, New Delhi, 2012; Scaffolding the Absent, The Guild, Mumbai, 2011; Ribbed Routes, The Guild, Mumbai, 2010; Birth of Blindness, the Stainless Gallery, New Delhi; The Dancer on the Horse, Berkeley Square Gallery, London, UK,.

*The* ***exhibition will be on view for public from 17th$^{nd}$ January to 16$^{th}$ February 2016, everyday from 10 am – 5 pm,*** *(Except on Mondays and National holidays)*